This Question Paper consists of 31 questions 8 printed pages.
ಈ ಪ್ರಶ್ನೆಪತ್ರಿಕೆಯಲ್ಲಿ 31 ಪ್ರಶ್ನೆಗಳಿದ್ದು 8 ಮುದ್ರಿತ ಪುಟಗಳನ್ನು ಹೊಂದಿದೆ.

Roll No.
ರೋಲ್ ನಂ.

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |

**Code No.** ಕೋಡ್ ನಂ. **65/S/A/K**

**Set / ಸೆಟ್** **A**

# KANNADA
# ಕನ್ನಡ
# (208)

Day and Date of Examination ....................................................................................
(ಪರೀಕ್ಷೆಯ ದಿನ ಮತ್ತು ತಾರೀಖು)

Signature of Invigilators 1. ....................................................................................
(ಉಸ್ತುವಾರಿದಾರರ ರುಜು)

2. ....................................................................................

**ಸಾಮಾನ್ಯ ಸೂಚನೆಗಳು :**

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.
2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿವೆಯೇ ಎಂದು ಪರೀಕ್ಷಿಸಿ. ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.
3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C) ಮತ್ತು (D)ಯನ್ನು ಬರೆಯಬೇಕು.
4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.
5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದುವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನರ್ಜಿತಗೊಳಿಸಲಾಗುವುದು.
6. ನಿಮ್ಮ ಪ್ರಶ್ನೆಪತ್ರಿಕೆಯ ಕೋಡ್ ನಂಬರ್ 65/S/A/K ಸೆಟ್ A ಉತ್ತರ ಪತ್ರಿಕೆಯಲ್ಲಿ ಬರೆಯಿರಿ.

# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ ಗರಿಷ್ಠ ಅಂಕಗಳು : 100

**ಸೂಚನೆಗಳು:** (i) ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

(ii) ಪ್ರಶ್ನೆ ಮತ್ತು ಉಪ-ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(iii) ಪ್ರಶ್ನೆ 1ರಿಂದ 11ರ ವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

**1.** ಶಾಲುಸಾಬಿ ಊರಿನವರ ಪಾಲಿಗೆ ______ 1

(A) ಕಥೆಗಾರ (B) ಧರ್ಮಾವತಾರ

(C) ಹಾಸ್ಯಗಾರ (D) ಕವಿ

**2.** 'ಇತ್ಯಾದಿ' ಈ ಪದ ______ ಸಂಧಿಗೆ ಉದಾಹರಣೆ. 1

(A) ಗುಣಸಂಧಿ (B) ವೃದ್ಧಿಸಂಧಿ

(C) ಆದೇಶ ಸಂಧಿ (D) ಯಣ್ ಸಂಧಿ

**3.** ಹಸಿವೆಂಬ ______ ಬಸಿರ ಬಂದು ಹಿಡಿದೆಡೆ. 1

(A) ಹಾವು (B) ಹೆಬ್ಬಾವು

(C) ಹಂದಿ (D) ಹಂಬಲ

**4.** ಜುಂಜೇಗೌಡನ ಮಗಳು ______ 1

(A) ಶಂಕ್ರಮ್ಮ (B) ಕಾರಮಕ್ಕ

(C) ರಾಕಾಶಿ (D) ಗೊಂಬೆ

**5.** ವಿಜ್ಞಾನಕ್ಕೆ ಆಧಾರ ______ 1

(A) ವಿಚಾರ ಮತ್ತು ವಿಮರ್ಶೆ (B) ಸನಾತನ ಧರ್ಮ

(C) ತರ್ಕ ಮತ್ತು ಪ್ರಯೋಗ (D) ಹಿಂದೂ ಧರ್ಮ

**6.** ಜಲದ ______ ಬಲ್ಲಿರ. 1

(A) ಕುಲವೇನಾದರೂ (B) ಮೂಲವೇನಾದರೂ

(C) ನೆಲವೇನಾದರೂ (D) ಜಡವೇನಾದರೂ

**7.** ಗಾಂಧೀಜಿಯವರ ಸೇವೆಯಲ್ಲಿ______ 1

(A) ದೀನದಲಿತರೇ ಬಹಳ (B) ಶ್ರೀಮಂತರೇ ಬಹಳ

(C) ಅಬಲೆಯರೇ ಬಹಳ (D) ಬಂಧುಗಳೇ ಬಹಳ

**8.** ಜಾವ ಎಂದರೆ ______ ಎಂದರ್ಥ. 1

(A) ಗಾಳಿ (B) ದೃಷ್ಟಿ

(C) ಬೆಳಗು (D) ಯಾಮ

**9.** ಗುರುವಿಂದ ______ ಉಂಟೆ ಸರ್ವಜ್ಞ. 1

(A) ತಂದೆ (B) ಬಂಧುಗಳು

(C) ಸ್ನೇಹಿತರು (D) ತಾಯಿ

**10.** ಶಾಂತಿಯು ______ಳಿಗೆ ಪತ್ರವನ್ನು ಬರೆದಳು. 1

(A) ತಾಯಿ (B) ವಿಜಯಾ

(C) ಸೀತಾ (D) ತಂಗಿಯಾದವ

**11.** ಕಂಪ್ಯೂಟರ್‌ನ ಕಿಟಕಿಯಲ್ಲಿ ಇಣುಕಿದರೆ ಏನು ಕಾಣುತ್ತದೆ? 1

(A) ಇಡೀ ಜಗತ್ತು (B) ಅಕ್ಷರಗಳು

(C) ಅಂಕಿಗಳು (D) ಕನಸುಗಳು

**12.** ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ :

ರಾಮೇಶ್ವರಂನ ಸಣ್ಣ ಪಟ್ಟಣದಲ್ಲಿ ವಾಸವಾಗಿದ್ದ ವಿವಿಧ ಧರ್ಮದವರು ತಮ್ಮದೇ ಆದ ಸಂಪ್ರದಾಯದ ಚೌಕಟ್ಟಿನೊಳಗೆ ಬಾಳುತ್ತಿದ್ದು ತಮ್ಮ ಧರ್ಮದ ಲಕ್ಷ್ಮಣ ರೇಖೆಯನ್ನು ದಾಟಲು ಸಿದ್ಧರಿರಲಿಲ್ಲ. ಆದರೆ, ನನ್ನ ವಿಜ್ಞಾನ ಗುರುಗಳಾದ ಸುಬ್ರಮಣ್ಯ ಅಯ್ಯರ್ ತಾನೊಬ್ಬ ಸಂಪ್ರದಾಯಬದ್ಧ ಬ್ರಾಹ್ಮಣನಾಗಿ, ಕಟ್ಟುನಿಟ್ಟಿನ ಆಚರಣೆಯ ಅಭ್ಯಾಸವನ್ನು ಹೊಂದಿದ್ದರೂ, ಅವರು ಓರ್ವ ಬಂಡುಗಾರರೇ ಸರಿ. ಹೀಗಾಗಿ ಅವರು ಸಂಪ್ರದಾಯದ ರೇಖೆಯನ್ನು ದಾಟಿ ನಿಂತು ಎಲ್ಲಾ ಧರ್ಮ ಹಾಗೂ ಜಾತಿ–ಪಂಗಡದವರಲ್ಲಿ ಸುಲಭವಾಗಿ ಬೆರೆತು ಬಾಳುವ ಸಾಧ್ಯತೆ ಬಗ್ಗೆ ಚಿಂತಿಸುತ್ತಿದ್ದರು. ನನ್ನೊಡನೆ ಹಲವಾರು ಗಂಟೆಗಳನ್ನು ಕಳೆಯುತ್ತಿದ್ದ ಅವರು 'ಕಲಾಂ' ನೀನೋರ್ವ ಪ್ರತಿಭಾವಂತನಾಗಿ ಬೆಳೆದು ದೊಡ್ಡ ನಗರಗಳಲ್ಲಿರುವ ವಿದ್ಯಾವಂತರ ಸಾಲಿನಲ್ಲಿ ನಿಲ್ಲುವಂತವನಾಗಬೇಕು ಎನ್ನುತ್ತಿದ್ದರು.

ಅವರು ಒಂದು ದಿನ ನನ್ನನ್ನು ಅವರ ಮನೆಗೆ ಊಟಕ್ಕೆ ಆಹ್ವಾನಿಸಿದರು. ಓರ್ವ ಮುಸ್ಲಿಂ ಹುಡುಗನನ್ನು ಆ ಮಡಿವಂತಿಕೆಯ ಭೋಜನಕ್ಕೆ ಕರೆದದ್ದು ನೋಡಿ ಅವರ ಪತ್ನಿ ದಂಗಾಗಿ ಹೋದರು. ಹೀಗಾಗಿ ನನಗೆ ಅಡುಗೆ ಕೋಣೆಯಲ್ಲಿ ಊಟ ನೀಡಲು ನಿರಾಕರಿಸಿದರು. ಇದರಿಂದ ಸುಬ್ರಮಣ್ಯ ಅಯ್ಯರ್ ವಿಚಲಿತರಾಗಲಿಲ್ಲ.

**ಪ್ರಶ್ನೆಗಳು :**

(ಕ) ವಿವಿಧ ಧರ್ಮದವರು ವಾಸವಾಗಿದ್ದ ಸಣ್ಣ ಪಟ್ಟಣ ________ 1

(A) ರಾಮೇಶ್ವರಂ (B) ತಮಿಳುನಾಡು

(C) ಬೆಂಗಳೂರು (D) ಕೇರಳ

(ಖ) ಕಲಾಂ ರವರ ಗುರು ________ 1

(A) ಅಣ್ಣಯ್ಯ (B) ದೇವೇಂದ್ರಯ್ಯ

(C) ಸುಬ್ರಮಣ್ಯ ಅಯ್ಯರ್ (D) ಸತೀಶ್ ನಾಯರ್

(ಗ) ಸುಬ್ರಮಣ್ಯ ಅಯ್ಯರ್ ಯಾವ ಜಾತಿಯವರು? 1

(ಘ) ವಿಜ್ಞಾನ ಗುರುಗಳ ಆಸೆ ಏನಾಗಿತ್ತು? 2

(ಙ) ಪಟ್ಟಣದ ಜನರು ಹೇಗೆ ವಾಸಿಸುತ್ತಿದ್ದರು? 2

(ಚ) ಕಲಾಂ ರವರನ್ನು ಊಟಕ್ಕೆ ಯಾರು ಆಹ್ವಾನಿಸಿದರು? 1

(ಛ) ಅಯ್ಯರ್ ಅವರ ವಿಶೇಷತೆ ಏನು? 2

(ಜ) ಸುಬ್ರಮಣ್ಯ ಅವರು ಯಾವುದರ ಬಗ್ಗೆ ಚಿಂತಿಸುತ್ತಿದ್ದರು? 2

(ಝ) ಕಲಾಂಗೆ ಊಟ ನೀಡಲು ಯಾರು ನಿರಾಕರಿಸಿದರು? 1

**13.** ಕೊಟ್ಟಿರುವ ಪದ್ಯವನ್ನು ಓದಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :

ಕೇಳಿ ಗಿಳಿಗಳೇ, ಏಳಿರೀಗಲೇ
ಕೋಳಿ ಕೂಗಿದೆ ಆಗಲೇ!
ರವಿಯ ಕಿರಣದ ರಂಗು ಹರಡಿದೆ
ಏಳಿರೇಳಿರಿ ಈಗಲೇ!!

ಮಬ್ಬು ಹರಿದಿದೆ, ನಿದ್ದೆ ಹಾರಿದೆ
ಸದ್ದು ಮಾಡದೆ ಏಳಿರಿ!
ತಂಪು ಗಾಳಿಯು ತೀಡುತಿರುವುದು
ಏಳಿ ಪುಲಕಿತರಾಗಿರಿ!!

ಮನೆಯ ಕೆಲಸಕೆ-ನೆರವು ನೀಡಿರಿ
ತಂದೆ-ತಾಯಿಗಳಿಗೆ ಹರುಷದಿ!
ಪ್ರೀತಿಯಿಂದಲಿ ಹಸುವು ಕರುವಿನ
ಮೈಯ ತೊಳೆಯಿರಿ ಚಂದದಿ!!

**ಪ್ರಶ್ನೆಗಳು :**

(ಕ) ಏನು ಕೂಗಿದೆ? 1

(A) ಗಿಳಿ (B) ರವಿ
(C) ಕೋಳಿ (D) ನಿದ್ದೆ

(ಖ) ರವಿಯ ಕಿರಣದ ರಂಗು ಹರಡಿದೆ
'ರವಿ' – ಇದರ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ. 1

(ಗ) ಮನೆಯ ಕೆಲಸಕೆ ನೆರವು ನೀಡಿರಿ
ಕೆಲಸ, ಮನೆ – ಇವುಗಳ ಬಹುವಚನ ರೂಪ 2

(ಘ) ತಂದೆ-ತಾಯಿ
ಮೇಲಿನ ಜೋಡು ನುಡಿಯಂತೆ ಇನ್ನೆರಡು ಜೋಡು ನುಡಿಗಳನ್ನು ಬರೆಯಿರಿ. 2

**14.** ಸೈಜುಗಲ್ಲುಗಳನ್ನು ಹೊತ್ತವರು ಯಾರು? 1

**15.** ಚೀಣಾದ ರಾಜಧಾನಿ ಯಾವುದು? 1

**16.** ಸವಿತಾ ಅವರು ಯಾವ ಊರಿನವರು? 1

**17.** ಪರಲೋಕದಲ್ಲಿ ಪ್ರಾಜ್ಞರು ಕೇಳುವ ಪ್ರಶ್ನೆಗಳು ಯಾವುವು? 1

**18.** (ಕ) ಯಾವ ನಾಡನ್ನು ಮನಸ್ಸು ಮರೆಯುವುದಿಲ್ಲ? 1

(ಖ) ಬೈಬಲ್, ಕುರಾನ್, ಪುಸ್ತಕ, ಭಗವದ್ಗೀತೆ –
ಇಲ್ಲಿ ಗುಂಪಿಗೆ ಸೇರದ ಪದ 1

**19.** ಕೆಳಗಿನವುಗಳಿಗೆ ಉತ್ತರಿಸಿರಿ :

(ಕ) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ : 2

*(i)* ರಥೋತ್ಸವ

*(ii)* ಧರ್ಮಾವತಾರ

*(iii)* ಈಗೀಗ

ಅಥವಾ

'ದೆಸೆಯಿಂದ' ಪ್ರತ್ಯಯ ಸೇರಿಸಿ 2 ಶಬ್ದಗಳನ್ನು ಬರೆಯಿರಿ.

(ಖ) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ : 2

*(i)* ಇತಿ + ಆದಿ

*(ii)* ಔಷಧ + ಉಪಚಾರ

*(iii)* ಪೌಷ್ಟಿಕ + ಅಂಶ

ಅಥವಾ

ಚಿಕಿತ್ಸೆಯನ್ನು, ಮನೆಗೆ, ಪರೀಕ್ಷೆಯಲ್ಲಿ –

ಈ ಪದಗಳ ವಿಭಕ್ತಿ ಪ್ರತ್ಯಯವನ್ನು ಬಿಡಿಸಿ ಬರೆಯಿರಿ (ಎರಡಕ್ಕೆ).

(ಗ) ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ ಎರಡಕ್ಕೆ ವಿರುದ್ಧ ಪದ ಬರೆಯಿರಿ : 2

*(i)* ಅಗತ್ಯ

*(ii)* ಭಯ

*(iii)* ರಾತ್ರಿ

ಅಥವಾ

ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ :

*(i)* ನಾನು ದೇವರಲ್ಲಿ <u>ಮೊರೆ</u>ಯಿಡುತ್ತೇನೆ.

*(ii)* ದೇವರು ನಮಗೆ ಯಾವಾಗಲೂ <u>ಪ್ರೀತಿ</u>ಸುತ್ತಾನೆ.

**20.** ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಬಳಸಿರಿ : 2

(ಕ) ಹೊಂಚುಹಾಕು

(ಖ) ನಾಮಹಾಕು

(ಗ) ನುಗ್ಗುನುರಿಯಾಗು

**21.** 'ಮನ್ವಂತರ' ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ? 1

**22.** ಕಡೂರು ಗ್ರಾಮದ ಜನರಿಗೆ ಲೇಖಕರು ಯಾವ ಸಲಹೆಯನ್ನು ನೀಡಿದರು? 4

**23.** ಭರತ ಭೂಮಿಯ ಮಹತ್ವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. 5

**24.** ಕೊಕ್ಕರೆಗಳು ಮೀನು ಹಿಡಿಯುವ ದೃಶ್ಯ ಕವಿಗೆ ಹೇಗೆ ಆಶ್ಚರ್ಯ ಮೂಡಿಸಿತು? ವಿವರಿಸಿರಿ. 5

ಅಥವಾ

ರಾಜನ ಮಗ ಯಾರನ್ನು ಮದುವೆಯಾಗಬೇಕೆಂದು ಕನಸು ಬಿದ್ದಿತು? ವಿವರವಾಗಿ ಬರೆಯಿರಿ.

**25.** ಕೆಳಗಿರುವ ಜೋಡು ನುಡಿಗಳನ್ನು ತಿಳಿದು ಯಾವುದಾದರೂ ಎರಡಕ್ಕೆ ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿರಿ : 2+2=4

(ಕ) ನುಚ್ಚು–ನೂರು

(ಖ) ಬಟ್ಟೆ–ಬರೆ

(ಗ) ಕಷ್ಟ–ಕಾರ್ಪಣ್ಯ

**26.** ಕ್ರಿಸ್ತರಾಜ ವಿದ್ಯಾಲಯ, ನಂಜನಗೂಡು, ಇಲ್ಲಿ ದಾಖಲಾದ ಅಧ್ಯಯನ ಕೇಂದ್ರಗಳ ಸಾಧನೆಯನ್ನು ತೋರಿಸುವ ಸರಳ ಸ್ತಂಭ (ದಂಡ) ಚಿತ್ರವನ್ನು ರಚಿಸಿರಿ : 5

| ವರ್ಷ | 2000 | 2001 | 2002 | 2003 | 2004 | 2005 |
|---|---|---|---|---|---|---|
| ಅಧ್ಯಯನ ಕೇಂದ್ರಗಳು | 9 | 5 | 2 | 2 | 20 | 22 |

ಅಥವಾ

ನೀವು ಮಹೇಶ, ತಂದೆ ದೇವೇಶ, ಊರು–ಪಿರಿಯಾಪಟ್ಟಣ, ಬಿ.ಕಾಂ. ಪದವೀಧರ ಎಂದು ಭಾವಿಸಿ ಕೆಳಗಿನ ಅರ್ಜಿಯನ್ನು ಭರ್ತಿಮಾಡಿರಿ :

ಉದ್ಯೋಗಕ್ಕಾಗಿ ಅರ್ಜಿ

ಗೆ,
ಶರಣ ಬಸವ ವಿದ್ಯಾಸಂಸ್ಥೆ
ಜಿಲ್ಲೆ – ಹಾಸನ
ಕರ್ನಾಟಕ

ಉದ್ಯೋಗದ ಹೆಸರು – ಪ್ರಥಮ ದರ್ಜೆ ಗುಮಾಸ್ತ

ಹೆಸರು : ........................................
ತಂದೆ : ........................................
ಜನ್ಮಸ್ಥಳ : ........................................
ಹುಟ್ಟಿದ ದಿನಾಂಕ : ........................................
ಪೂರ್ಣ ವಿಳಾಸ : ........................................
ರಾಷ್ಟ್ರೀಯತೆ : ........................................
ಮತ/ಜಾತಿ : ........................................
ವಿದ್ಯಾರ್ಹತೆ : ........................................
ಅನುಭವ : ........................................
ಓದಿದ ಶಾಲೆಯಿಂದ ದೃಢೀಕರಣ ಪತ್ರ : ........................................
ಬ್ಯಾಂಕ್/ಅಂಚೆ ಕಛೇರಿಯ ಹೆಸರು : ........................................
ಖರೀದಿಸಿದ ಡಿ.ಡಿ./ಪಿ.ಓ. ನಂ : ........................................

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಸರ್ಟಿಫಿಕೇಟುಗಳನ್ನು ಲಗತ್ತಿಸಿದ್ದೇನೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿನ ಎಲ್ಲಾ ವಿಚಾರಗಳೂ ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ಧನ್ಯವಾದಗಳು

ತಮ್ಮ ವಿಧೇಯ
ಹಸ್ತಾಕ್ಷರ
(ಹೆಸರು)

**27.** ಬನವಾಸಿಯಲ್ಲಿ ಪಂಚೇಂದ್ರಿಯಗಳಿಗೆ ಸುಖ ಕೊಡುವ ಅಂಶಗಳಾವುವು? 5

**28.** ಈ ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ : 1×5=5

(ಕ) ಕನಾಟಕ ಎಕಿಕರಣಕೆ ದುಡದ ಮಹನಾಯರೂ.
(ಶುದ್ಧರೂಪದಲ್ಲಿ ಬರೆಯಿರಿ)

(ಖ) ಏಕಲವ್ಯ ಶ್ರೇಷ್ಠ ಧನುರ್ಧರ. ಇಲ್ಲಿ ಧನುರ್ಧರ – ಇದರ ಬಹುವಚನ ರೂಪ ________

(ಗ) ರಪರಪ : ಅನುಕರಣೆ ನುಡಿ : : ಓಡೋಡಿ : ________

(ಘ) ಅಷ್ಟು ಸಾಕು ಮುಂದಿನದು ನನಗೆ ಬಿಡು
(ಇಲ್ಲಿ ಇರಬೇಕಾದ ಲೇಖನ ಚಿಹ್ನೆ)

(ಙ) ಸೀತೆ ರಾಮನ ಸಂಗಡ ಕಾಡಿಗೆ ಹೋದಳು.
(ಇದನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿರಿ)

**29.** ಡಾ. ವಿ.ಎಸ್. ಶಿರಹಟ್ಟಿಯವರು ಬರೆದ 'ಹೂವಿನ ಹಂದರ' ಪುಸ್ತಕವನ್ನು ಕಳುಹಿಸಿಕೊಡುವಂತೆ ಕೋರಿ, ವ್ಯವಸ್ಥಾಪಕರು, ಗುರುಕುಲ ಪುಸ್ತಕಾಲಯ, ಬೆಳಗಾವಿ – ಇವರಿಗೆ ಒಂದು ಪತ್ರ ಬರೆಯಿರಿ. 7

ಅಥವಾ

ನಿಮ್ಮ ಹೆಸರು ಅಭಿಷೇಕ / ಅನನ್ಯ, ಮನೆ ನಂ.–125, ರಾಜಾಜಿನಗರ, ಮೈಸೂರು–26 ಎಂದು ಭಾವಿಸಿ, ಕೊಡಗಿನಲ್ಲಿ ವಾಸಿಸುತ್ತಿರುವ ನಿಮ್ಮ ಗೆಳೆಯ/ಗೆಳತಿ, ನಿತಿನ್ / ನಿಶಾಗೆ ನಿಮ್ಮ ಅಕ್ಕನ ಮದುವೆಗೆ ಆಮಂತ್ರಿಸುತ್ತಾ ಒಂದು ಪತ್ರ ಬರೆಯಿರಿ.

**30.** ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು 50 ಶಬ್ದಗಳಿಗೆ ಮೀರದಂತೆ ಬರೆಯಿರಿ : 5

(ಕ) ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ

(ಖ) ದುಡಿಮೆಯ ನಂಬಿ ಬದುಕು, ಅದರಲಿ ದೇವರ ಹುಡುಕು

(ಗ) ಆರೋಗ್ಯವೇ ಭಾಗ್ಯ

**31.** ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 200 ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ : 10

(ಕ) ನನ್ನ ಜೀವನದ ಗುರಿ

(ಖ) ದೂರದರ್ಶನ

(ಗ) ಸ್ವಚ್ಛ ಭಾರತ ಅಭಿಯಾನ

★ ★ ★